ಮಾನ್ಯ ವಿಶೇಷ ಜಿಲ್ಲಾಧಿಕಾರಿಗಳು, ಭೂಸ್ವಾಧೀನ ಪುನರವಸತಿ ಮತ್ತು ಪುನರನಿರ್ಮಾಣ, ಬೃಹತ ನೀರಾವರಿ ಯೋಜನೆಗಳು, ಬೆಳಗಾವಿ.
ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಮತ್ತು ಸೂಕ್ತ ಪರಿಹಾರದ ಹಕ್ಕು ಪುನರವಸತಿ ಮತ್ತು ಪುನರನಿರ್ಮಾಣ ಕಾಯ್ದೆ 2013 ರ
(ದಿ:01-01-2014 ರಿಂದ ಜಾರಿಗೆ ತಂದ ಅಧಿಸೂಚನೆ ಪ್ರಕಾರ) ರೊಂದಿಗೆ ಓದಲಾದ ಕಲಂ 11(1) ರಲ್ಲಿ ಮಾಡಿದ ಅಧಿಸೂಚನೆ.

ಸಂ. ಭೂಸ್ವಾ/ರಾಂಏಇ/ಸಿಆರ್-31/12-13/46/17-18 ದಿನಾಂಕ: 16/01/2018

ಈ ಕೆಳಗಿನ ಅನೂಸೂಚಿಯಲ್ಲಿ ಕಾಣಿಸಿದ ಜಮೀನುಗಳು ಒಂದು ಸಾರ್ವಜನಿಕ ಉದ್ದೇಶಕ್ಕಾಗಿ ಬೆಳಗಾವಿ ಜಿಲ್ಲೆ ಗೋಕಾಕ ತಾಲ್ಲೂಕಿನ ಯಾದವಾಡ ಗ್ರಾಮದಲ್ಲಿ ಶ್ರೀ ರಾಮೇಶ್ವರ ಏತ ನೀರಾವರಿ ಯೋಜನೆಯಡಿಯಲ್ಲಿ ಬರುವ ಕಳ್ಳಿಗುದ್ದಿ ಮುಖ್ಯಕಾಲುವೆಯ ಡಿಸ್ಟ್ರಿಬ್ಯೂಟರಿ 5 ರ ಕಿ.ಮೀ. 0.000 ರಿಂದ ಕಿ.ಮೀ. 4.352 ರ ವರೆಗಿನ ನಿರ್ಮಾಣಕ್ಕಾಗಿ ಬೇಕಾಗುವುದೆಂದು ವಿಶೇಷ ಜಿಲ್ಲಾಧಿಕಾರಿಗಳು, ಭೂಸ್ವಾಧೀನ, ಪುನರ ವಸತಿ ಮತ್ತು ಪುನರ ನಿರ್ಮಾಣ ಬೃಹತ ನೀರಾವರಿ ಯೋಜನೆಗಳು, ಬೆಳಗಾವಿ ಇವರಿಗೆ ಕಂಡು ಬಂದಿದೆ.

ಈ ಮೂಲಕ ತಿಳಿಸುವದೇನೆಂದರೆ, ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಮತ್ತು ಸೂಕ್ತ ಪರಿಹಾರದ ಹಕ್ಕು ಪುನರವಸತಿ ಮತ್ತು ಪುನರ್‌ನಿರ್ಮಾಣ ಕಾಯ್ದೆ 2013 ರ (ದಿನಾಂಕ: 01-01-2014 ರಿಂದ ಜಾರಿಗೆ ತಂದ ಅಧಿಸೂಚನೆ ಪ್ರಕಾರ) ಕರ್ನಾಟಕ ಸರಕಾರದ ಆದೇಶ ಸಂ:ಕಂಇ:18:ಆರ್‌ಇಎಚ್: 2014 ದಿನಾಂಕ: 06-02-2014 ರಂತೆ ಹೊಸ ಕಾಯ್ದೆ 2013 ರ ಕಲಂ 11 ರ ಸೌಲಭ್ಯದ ಮೇರೆಗೆ (2013 ಕೇಂದ್ರದ 30 ನೇ ಕಾಯ್ದೆ) ಸದರ ಕಾನೂನಿನ ಕಲಂ 12 ರ ಮೇರೆಗೆ ಪ್ರದತ್ತವಾದ ಅಧಿಕಾರ ಚಲಾಯಿಸುವಂತೆ ವಿಶೇಷ ಜಿಲ್ಲಾಧಿಕಾರಿಗಳು, ಭೂಸ್ವಾಧೀನ, ಪುನರವಸತಿ ಮತ್ತು ಪುನರನಿರ್ಮಾಣ, ಬೃಹತ ನೀರಾವರಿ ಯೋಜನೆಗಳು, ಬೆಳಗಾವಿ ರವರು ಈ ಮೂಲಕ ಕಾರ್ಯಪಾಲನೆ ಪ್ರಾಧಿಕಾರವನ್ನು ವಿಶೇಷ ಭೂಸ್ವಾಧೀನಾಧಿಕಾರಿಗಳು, ಹಿಡಕಲ್ ಡ್ಯಾಮ್ ಇವರಿಗೆ ನೀಡಲಾಗಿದೆ. ಹಾಗೂ ಕಲಂ 43 ರ ಮೇರೆಗೆ ಪುನರವಸತಿ ಮತ್ತು ಪುನರನಿರ್ಮಾಣದ ಅಧೀಕೃತ ಪ್ರಾಧಿಕಾರದ ಕಾರ್ಯಪಾಲನೆಯನ್ನು ವಿಶೇಷ ಭೂಸ್ವಾಧೀನಾಧಿಕಾರಿಗಳು ಇವರಿಗೆ ನೀಡಲಾಗಿದೆ.

ಸರಕಾರದ ಆದೇಶ ಸಂ:ಕಂಇ:36:ಭೂಸ್ವಾವಿ:2014 ದಿನಾಂಕ: 13-03-2014 ರನ್ವಯ ಮತು ತಿದ್ದುಪಡಿ ಆದೇಶ ದಿನಾಂಕ:22-04-2014 ರನ್ವಯ ಕಲಂ 6(2) ರ ಅಡಿಯಲ್ಲಿ ನೀರಾವರಿ ಯೋಜನೆಗಳಿಗಾಗಿ ಭೂಸ್ವಾಧೀನಪಡಿಸುವಾಗ ಪರಿಸರದ ಮೇಲಿನ ಪರಿಣಾಮ ನಿರ್ಧರಣದ ಅಂಶ (Environmental Impact Assessment) ಪ್ರಕ್ರಿಯೆಯನ್ನು ಬೇರಾವುದೇ ಕಾಯ್ದೆಗಳಡಿಯಲ್ಲಿ ಮಾಡಬೇಕಾದಲ್ಲ ಸಾಮಾಜಿಕ ನಿರ್ಧರಣದ ಅಂಶ (Social Impact Assessment) ರಾಮೇಶ್ವರ ಯೋಜನೆಗೆ ಅನ್ವಯಿಸುವುದಿಲ್ಲವೆಂದು ಸ್ಪಷ್ಟೀಕರಿಸಿದೆ.

2013 ರ ಕಾಯ್ದೆ ಕಲಂ 16(1) ರ ಮೇರೆಗೆ ಆಸಕ್ತಿವುಳ್ಳವರು ತಮ್ಮ ತಂಟೆ-ತಕರಾರುಗಳನ್ನು ಈ ಅಧಿಸೂಚನೆ ಪ್ರಕಟಗೊಂಡ 60 ದಿನದೊಳಗೆ ಈ ಕಾರ್ಯಾಲಯಕ್ಕೆ ಅರ್ಜಿ ಸಲ್ಲಿಸಬೇಕು. ನಂತರ ಬಂದ ಅರ್ಜಿಗಳನ್ನು ಯಾವುದೇ ಮುನ್ಸೂಚನೆ ನೀಡದೇ ವಿಲೇಯಕ್ಕೆ ಹಾಕಲಾಗುವುದು.

ಈ ಜಮೀನು ಸ್ವಾಧೀನ ಕೆಲಸ ನಿರ್ವಹಿಸುವಲ್ಲಿ ಸರಕಾರದಿಂದ ನೇಮಿಸಲ್ಪಟ್ಟ ಮೋಜಣಿದಾರರಿಗಾಗಲಿ ಅಥವಾ ಈ ಕೆಲಸ ಮಾಡುವವರಿಗೆ ಯಾರೂ ಅಡ್ಡಿ ಮಾಡಕೊಡದೆಂದು ಎಚ್ಚರಿಸಲಾಗಿದೆ. ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಮತ್ತು ಸೂಕ್ತ ಪರಿಹಾರದ ಹಕ್ಕು, ಪುನರವಸತಿ ಮತ್ತು ಪುನರನಿರ್ಮಾಣ ಕಾಯ್ದೆ 2013 ರ ಕಾಯ್ದೆ ಕಲಂ 11(4) ರ ಮೇರೆಗೆ ಈ ಅಧಿಸೂಚನೆ ಪ್ರಕಟಗೊಂಡ ದಿನಾಂಕದಿಂದ ಸದರಿ ಸ್ವಾಧೀನಪಡಿಸಿಕೊಳ್ಳಲಿರುವ ಭೂಮಿಯನ್ನು ಒಪ್ಪಂದದ ಮೇರೆಗೆ ವಿಕ್ರಯಿಸುವ, ಭೋಗ್ಯಕ್ಕೆ ಅಡವಿಡುವ, ಅನುಭವಿಸುವ, ಬದಲಾಯಿಸುವ ಅಥವಾ ಇನ್ನಾವುದೇ ರಿತಿಯ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲು ನಿರ್ಬಂದಿಸಿದೆ. ಅಂತಹ ಯಾವುದೇ ಕ್ರಯ ಅಥವಾ ಇನ್ನಾವುದೇ ರೀತಿಯ ಅಭಿವೃದ್ಧಿ ಕಾರ್ಯಗಳನ್ನು ಐತೀರ್ಪು ರಚಿಸುವಾಗ ಗಣನೆಗೆ ತೆಗೆದುಕೊಳ್ಳದೇ ಅಂತಿಮವಾಗಿ ಸದರಿ ಕಾಯ್ದೆ ಅನ್ವಯ ಭೂಸ್ವಾಧೀನ ಪಡಿಸಿಕೊಳ್ಳಲಾಗುವುದೆಂದು ಈ ಮೂಲಕ ತಿಳಿಯಪಡಿಸಲಾಗಿದೆ.